ಕರ್ನಾಟಕ ಸರ್ಕಾರ

**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

**ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ**


C/o. ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.

**E-mail ID: icpssarakar@gmail.com** **Ph.No.080-22879382**


ಸಂಖ್ಯೆ: ಐಸಿಪಿಎಸ್/ಕಾ.ಮ.ಬ್ಯೂ/ಅನುದಾನ/61/2015-16 ದಿನಾಂಕ:11.12.2018

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು

ಮಾನ್ಯರೇ,

ವಿಷಯ: MCB ಕಾರ್ಯಚಟುವಟಿಕೆ ಸ್ಥಗಿತಗೊಳಿಸುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುದಾನ ಅಲಭ್ಯತೆ ಹಾಗು ಇನ್ನಿತರ ಕಾರಣಗಳಿಂದ ಕಾಣೆಯಾದ ಮಕ್ಕಳ ಬ್ಯೂರೋಗೆ ನೀಡುತ್ತಿದ್ದ ಅನುದಾನವನ್ನು **ದಿನಾಂಕ:01.10.2018** ರಿಂದ ಸ್ಥಗಿತಗೊಳಿಸಲಾಗಿದೆ. ಸದರಿ ಸಂಸ್ಥೆಗಳಿಗೆ ಮಾರ್ಚ್ 2016ರವರೆಗೆ ಅನುದಾನವನ್ನು ಈಗಾಗಲೇ ಬಿಡುಗಡೆಗೊಳಿಸಲಾಗಿದೆ. ಮುಂದುವರೆದಂತೆ ಸೆಪ್ಟೆಂಬರ್ 2018 ರವರೆಗಿನ ಅನುದಾನ ಬಿಡುಗಡೆಗೆ ಸಂಬಂಧಪಟ್ಟಂತೆ ಈ ಕೆಳಕಂಡ ಮಾಹಿತಿಗಳನ್ನು ಒದಗಿಸಲು ಕೋರಿದೆ.

1. ಜಿಲ್ಲೆಯಲ್ಲಿ ಕಾಣೆಯಾದ ಮಕ್ಕಳ ಬ್ಯೂರೋ ಕಾರ್ಯ ನಿರ್ವಹಣೆಗಾಗಿ ಬಿಡುಗಡೆಯಾದ ಅನುದಾನದಲ್ಲಿ ನವೆಂಬರ್ 2018ರ ಅಂತ್ಯದವರೆಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿರವರ ಬಳಿ ಉಳಿಕೆಯಾಗಿರುವ ಮೊತ್ತದ ವಿವರಗಳ ಕುರಿತ ಮಾಹಿತಿಯನ್ನು ಸಲ್ಲಿಸುವುದು.
2. 2014-15, 2015-16 ರವರೆಗೆ ಬಿಡುಗಡೆಗೊಂಡ ಅನುದಾನ ಹಾಗು ಕಾಣೆಯಾದ ಮಕ್ಕಳ ಬ್ಯೂರೋ ಕಾರ್ಯನಿರ್ವಹಿಸಿರುವ ಬಗ್ಗೆ ದೃಢೀಕೃತ ಮಾಹಿತಿ ಮತ್ತು ಆ ಅವಧಿಗೆ ಸಂಬಂಧಿಸಿದಂತೆ ಸನ್ನದು ಲೆಕ್ಕಿಗರಿಂದ ಆಡಿಟ್ ವರದಿ ಹಾಗು ವರ್ಷವಾರು ಬಳಕೆ ಪ್ರಮಾಣ ಪತ್ರವನ್ನು ಸಂಸ್ಥೆಗಳಿಂದ ಪಡೆದು ದೃಢೀಕರಿಸಿ ಸಲ್ಲಿಸಲು ತಿಳಿಸಿದೆ.
3. ಈಗಾಗಲೇ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಪಟ್ಟಂತೆ ಪ್ರಸ್ತುತ ಸಂಸ್ಥೆಯ ಖಾತೆಯಲ್ಲಿ ಲಭ್ಯವಿರುವ ಉಳಿಕೆ ಮೊತ್ತ.
4. 2016-17, 2017-18 (ಸೆಪ್ಟೆಂಬರ್ 2018)ರ ಅಂತ್ಯದವರೆಗಿನ ಅನುದಾನ ಬಿಡುಗಡೆಗೆ ಕ್ರಮವಹಿಸಲು ಅನುವಾಗುವಂತೆ ಕಾಣೆಯಾದ ಮಕ್ಕಳ ಬ್ಯೂರೋದ ಯೋಜನಾ ಸಂಯೋಜಕರ ಹಾಜರಾತಿ ವಹಿಯನ್ನು ಸಂಸ್ಥೆಯಿಂದ ಪಡೆದು ದೃಢೀಕರಿಸಿ ಸಲ್ಲಿಸುವುದು ಮತ್ತು ಈ ಅವಧಿಗೆ ಸಂಸ್ಥೆಯು ಖರ್ಚು ಮಾಡಿರುವ ಮೊತ್ತದ ವಿವರಗಳನ್ನು ಸಹ ಮುಂದಿನ ಕ್ರಮಕ್ಕಾಗಿ ಆದಷ್ಟು ಬೇಗ ವಿಳಂಬಕ್ಕೆ ಆಸ್ಪದ ವಿಲ್ಲದಂತೆ ಸಲ್ಲಿಸಲು ತಿಳಿಸಿದೆ.

ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ 1, 2 ಮತ್ತು 3 ಗಳಿಗೆ ಸಂಬಂಧಿಸಿದ ಅಗತ್ಯ ಮಾಹಿತಿಗಳನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

13/12

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.

ಪ್ರತಿಯನ್ನು: ಮುಖ್ಯಸ್ಥರು, ನೋಡೆಲ್ ಏಜೆನ್ಸಿ, ಬಾಸ್ಕೋ, ಬೆಂಗಳೂರು ಇವರ ಮಾಹಿತಿಗಾಗಿ ಹಾಗು ಮುಂದಿನ ಕ್ರಮಕ್ಕಾಗಿ